

بسم اللهِ الرّحمٰن الرّحيم

# ಹಝ್ರತ್ ಮಸೀಹ್ ಮೌಊದ್(ಅ)ರ ಉಲ್ಲೇಖಗಳ ಬೆಳಕಿನಲ್ಲಿ ಏಕದೇವ ವಿಶ್ವಾಸದ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–04–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಲೋಕದಲ್ಲಿ ತೌಹೀದನ್ನು ಸ್ಥಾಪಿಸುವುದಕ್ಕಾಗಿ ಹಝ್ರತ್ ಪೈಗಂಬರ್(ಸ)ರಿಗಿದ್ದ ತುಡಿತ, ಪ್ರಯತ್ನ, ಧೈರ್ಯ ಹಾಗೂ ಶಿರ್ಕಿನ ಪ್ರತಿಯೊಂದು ಆಯಾಮವನ್ನು ಎದುರಿಸಲು ಬಂಡೆಯಂತೆ ದೃಢವಾಗಿ ನಿಂತದ್ದು ಮತ್ತು ಪ್ರತಿಯೊಂದು ಜನಾಂಗದ ಶಿರ್ಕಿನ ಆಲೋಚನೆಗಳ ವಿರುದ್ಧ ನಿಂತು ಸತ್ಯವನ್ನು ಸಾರಿದ ಬಗ್ಗೆ ನಾವು ಈ ಮೊದಲೇ ಓದಿದ್ದೇವೆ.

ಈ ಕುರಿತಾಗಿ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಸಾವಿರಾರು ಅಪಾಯಗಳು ಎದುರಾದರೂ ಲಕ್ಷಾಂತರ ವಿರೋಧಿಗಳು, ಅಡ್ಡಿಪಡಿಸುವವರು ಮತ್ತು ಬೆದರಿಸುವವರು ಮುಂದೆ ಬಂದರೂ ಹಝ್ರತ್ ಪೈಗಂಬರ್(ಸ) ತಮ್ಮ ಪ್ರವಾದಿತ್ವದ ವಾದದ ಮೇಲೆ ಮೊದಲಿನಿಂದ ಕೊನೆಯ ಉಸಿರಿನವರೆಗೆ ಎಷ್ಟು ದೃಢತೆಯಿಂದ ಮತ್ತು ಸ್ಥಿರವಾಗಿ ನಿಂತರು ಎಂಬುದನ್ನು ನಾವು ಯೋಚಿಸಬೇಕು."

"ತಮ್ಮ ಸ್ಪಷ್ಟ ನುಡಿಯಿಂದ ತೌಹೀದಿನ ಉಪದೇಶ ಮಾಡಿ, ಶಿರ್ಕಿನಲ್ಲಿ ಮುಳುಗಿದ್ದ ಎಲ್ಲ ಜನಾಂಗಗಳನ್ನು, ಎಲ್ಲ ಪಂಗಡಗಳನ್ನು ಮತ್ತು ಇಡೀ ಲೋಕದ ಜನರನ್ನು ಅವರು ತಮ್ಮ ವಿರೋಧಿಗಳನ್ನಾಗಿ ಮಾಡಿಕೊಂಡರು... ಹಝ್ರತ್ ಪೈಗಂಬರ್(ಸ) ಒಮ್ಮಿಂದೊಮ್ಮೆಲೆ ತಮ್ಮವರೆನ್ನದೆ, ಪರರೆನ್ನದೆ ಎಲ್ಲರೊಡನೆಯೂ ಸಂಬಂಧ ಕಡಿದುಕೊಂಡದ್ದು ಹಾಗೂ ಆ ದಿನಗಳಲ್ಲಿ ಅತ್ಯಂತ ದ್ವೇಷಕ್ಕೆ ಗುರಿಯಾಗಿದ್ದ ಮತ್ತು ನೂರಾರು ಸಂಕಷ್ಟಗಳಿಗೆ ಹಾಗೂ ಪ್ರಾಣಾಪಾಯಕ್ಕೂ ಕಾರಣವಾಗಿದ್ದ ತೌಹೀದನ್ನು ಮಾತ್ರ ಬಲವಾಗಿ ಹಿಡಿದುಕೊಂಡದ್ದು, ಯಾವುದಾದರೂ ಲೌಕಿಕ ಲಾಭಕ್ಕಾಗಿ ಆಗಿರಲು ಹೇಗೆ ಸಾಧ್ಯ? ಎಂದು ಯೋಚಿಸಬೇಕು.

"ಇದಲ್ಲದೇ, ಒಬ್ಬ ವಿವೇಕಿ ಮನುಷ್ಯನು ಈ ಪರಿಸ್ಥಿತಿಗಳನ್ನು ಗಂಭೀರವಾಗಿ ಯೋಚಿಸುವಾಗ, ಹಝ್ರತ್ ಪೈಗಂಬರ್(ಸ) ಆಗಮಿಸಿದ ಆ ಕಾಲವು ವಾಸ್ತವದಲ್ಲಿ ಒಬ್ಬ ಶ್ರೇಷ್ಠ ಹಾಗೂ ಅತ್ಯುನ್ನತ ದೈವಿಕ ಸುಧಾರಕನ ಮತ್ತು ಮಾರ್ಗದರ್ಶಕನ ತೀವ್ರ ಅಗತ್ಯವಿದ್ದ ಕಾಲವಾಗಿತ್ತು ಎಂದು ತಿಳಿದು ಬರುತ್ತದೆ. ಅವರು ನೀಡಿದ ಪ್ರತಿಯೊಂದು ಬೋಧನೆಯೂ ವಾಸ್ತವದಲ್ಲಿ ಸತ್ಯ ಮತ್ತು ಪವಿತ್ರವಾಗಿತ್ತು ಹಾಗೂ ಅದರ ತೀವ್ರ ಅಗತ್ಯವಿತ್ತು."

ಮುಕ್ತಿಗೆ ಆಧಾರವಾಗಿರುವ ತೌಹೀದ್ ಲೋಕದಲ್ಲಿ ಯಾವ ಗ್ರಂಥದ ಮೂಲಕ ಅತಿ ಹೆಚ್ಚು ಪ್ರಸಾರವಾಯಿತು? ಬೈಬಲ್‌ನಿಂದ ಜಗತ್ತಿನಲ್ಲಿ ತೌಹೀದ್ ಹರಡಿದೆ ಎಂದು ಯಾರಾದರೂ ಹೇಳಬಲ್ಲರೇ? ಮೂರು ದೇವರುಗಳ ನಂಬಿಕೆಯನ್ನೇ ಆಧರಿಸಿರುವ ಕ್ರೈಸ್ತರು ಏಕದೇವೋಪಾಸನೆಯ ಬೋಧಕರಾಗಲು ಹೇಗೆ ಸಾಧ್ಯ? ಅವರ ದೃಷ್ಟಿಯಲ್ಲಿ ಕಾಲ್ಪನಿಕ ಸ್ವರ್ಗವನ್ನು ಯುರೋಪಿನ ಎರಡು ದೊಡ್ಡ ದೇಶಗಳಾದ ರಷ್ಯಾ ಮತ್ತು ಬ್ರಿಟನ್‌ಗೆ ಅರ್ಧ–ಅರ್ಧ ಹಂಚಲಾಗುವುದು.

ಈಗಂತೂ ಅದರಲ್ಲಿ ಮತ್ತಷ್ಟು ದೊಡ್ಡ ದೇಶಗಳು ಪಾಲನ್ನು ಪಡೆದುಕೊಂಡಿವೆ. ಅಮೇರಿಕದವರೂ ಇದನ್ನೇ ಹೇಳುತ್ತಾರೆ. ಈಗಂತೂ ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಸೀಹರ ಎರಡನೇ ಆಗಮನವಾಗಿದ್ದಾರೆ ಎಂದೂ ಹೇಳಲಾಗುತ್ತಿದೆ. **ಇನ್ನಾ ಲಿಲ್ಲಾಹಿ.** ಅವರ ಪ್ರಕಾರ ಏಕದೇವೋಪಾಸಕರು ನರಕದ ಬೆಂಕಿಗೆ ತಳ್ಳಲ್ಪಡುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಇಂದು ಲೋಕದಲ್ಲಿ ತೌಹೀದ್ ಎಂಬುದು ಹಝ್ರತ್ ಪೈಗಂಬರ್(ಸ)ರ ಸಮುದಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಪಂಗಡದಲ್ಲಿ ಕಂಡುಬರುವುದಿಲ್ಲ. ಕೋಟ್ಯಂತರ ಜನರನ್ನು ದೇವನ ಏಕತ್ವದ ಮೇಲೆ ನಿಲ್ಲಿಸುವ ಹಾಗೂ ಅತ್ಯಂತ ಗೌರವದಿಂದ ಆ ಸತ್ಯ ದೇವನ ಕಡೆಗೆ ಮಾರ್ಗದರ್ಶನ ನೀಡುವ ಪವಿತ್ರ ಖುರ್‌ಆನನ್ನು ಹೊರತುಪಡಿಸಿ ಬೇರೆ ಯಾವುದೇ ಗ್ರಂಥದ ಕುರುಹು ಸಿಗುವುದಿಲ್ಲ. ಪ್ರತಿಯೊಂದು

ಜನಾಂಗವೂ ತಮ್ಮದೇ ಆದ ಕೃತಕ ದೇವರನ್ನು ಸೃಷ್ಟಿಸಿಕೊಂಡಿವೆ, ಆದರೆ ಮುಸ್ಲಿಮರ ದೇವನು ಮಾತ್ರ ಪುರಾತನ ಕಾಲದಿಂದಲೂ ಶಾಶ್ವತನೂ, ಬದಲಾಗದವನೂ ಆಗಿದ್ದಾನೆ ಮತ್ತು ತನ್ನ ಅನಾದಿ ಗುಣಗಳಲ್ಲಿ ಮೊದಲಿನಂತೆಯೇ ಇದ್ದಾನೆ."

"ಇಡೀ ಲೋಕದಲ್ಲಿ ಶಿರ್ಕ್, ಮಾರ್ಗಭ್ರಷ್ಟತೆ ಮತ್ತು ಸೃಷ್ಟಿಗಳ ಆರಾಧನೆಯು ಹರಡಿದ್ದ ಕಾಲದಲ್ಲಿ ಹಝ್ರತ್ ಪೈಗಂಬರ್[ಸ] ನಿಯೋಜಿಸಲ್ಪಟ್ಟರು. ಎಲ್ಲ ಜನರು ಸತ್ಯ ತತ್ವಗಳನ್ನು ತ್ಯಜಿಸಿದ್ದರು ಮತ್ತು ನೇರ ಮಾರ್ಗವನ್ನು ಮರೆತು, ಪ್ರತಿಯೊಂದು ಪಂಗಡವೂ ತಮ್ಮತಮ್ಮ ನವೀನ ಪದ್ಧತಿಗಳ ದಾರಿಯನ್ನು ಹಿಡಿದಿತ್ತು. ಅರೇಬಿಯಾದಲ್ಲಿ ವಿಗ್ರಹಾರಾಧನೆ ತೀವ್ರವಾಗಿತ್ತು. ಪರ್ಷಿಯಾದಲ್ಲಿ ಅಗ್ನಿ ಆರಾಧನೆ ವ್ಯಾಪಕವಾಗಿತ್ತು, ಭಾರತದಲ್ಲಿ ವಿಗ್ರಹಾರಾಧನೆಯ ಜೊತೆಗೆ ಸಾವಿರಾರು ಬಗೆಯ ಸೃಷ್ಟಿಗಳ ಆರಾಧನೆ ಹರಡಿತ್ತು. ಪ್ರಸ್ತುತ ಕಾಲಘಟ್ಟವೇ ಓರ್ವ ಶ್ರೇಷ್ಠ ವೈದ್ಯ ಹಾಗೂ ಸುಧಾರಕನನ್ನು ಬಯಸುತ್ತಿದ್ದಾಗ ಮತ್ತು ದೈವಿಕ ಮಾರ್ಗದರ್ಶನದ ತೀವ್ರ ಅಗತ್ಯವಿದ್ದ ಸಾರ್ವತ್ರಿಕ ಮಾರ್ಗಭ್ರಷ್ಟತೆಯ ಕಾಲದಲ್ಲಿ ಹಝ್ರತ್ ಪೈಗಂಬರ್[ಸ] ಆಗಮಿಸಿ, ಇಡೀ ಜಗತ್ತನ್ನು ತೌಹೀದ್ ಮತ್ತು ಸತ್ಕಾರ್ಯಗಳಿಂದ ಬೆಳಗಿಸಿದ್ದು ಹಾಗೂ ಎಲ್ಲ ಕೆಡುಕುಗಳ ಮೂಲವಾಗಿರುವ ಶಿರ್ಕ್ ಮತ್ತು ಸೃಷ್ಟಿಗಳ ಆರಾಧನೆಯನ್ನು ಬೇರುಸಹಿತ ಕಿತ್ತುಹಾಕಿದ್ದು, ಹಝ್ರತ್ ಪೈಗಂಬರ್[ಸ] ದೇವನ ಸತ್ಯ ಪ್ರವಾದಿಯಾಗಿದ್ದಾರೆ ಹಾಗೂ ಎಲ್ಲ ಪ್ರವಾದಿಗಳಿಗಿಂತ ಶ್ರೇಷ್ಠರಾಗಿದ್ದಾರೆ ಎಂಬುದಕ್ಕೆ ಸ್ಪಷ್ಟ ಸಾಕ್ಷಿಯಾಗಿದೆ."

"ಜನರು ದೇವನ ಮಾರ್ಗವನ್ನು ಮರೆತು ದೇವನನ್ನು ಮತ್ತು ತೌಹೀದನ್ನು ತ್ಯಜಿಸುವಾಗ, ಅಲ್ಲಾಹನು ತನ್ನ ಕಡೆಯಿಂದ ಒಬ್ಬ ದಾಸನಿಗೆ ಪರಿಪೂರ್ಣ ಜ್ಞಾನವನ್ನು ದಯಪಾಲಿಸಿ ಮತ್ತು ತನ್ನ ವಚನ ಹಾಗೂ ದೇವವಾಣಿಯಿಂದ ಗೌರವಿಸಿ, ಆಗಿರುವ ಎಲ್ಲ ಕೆಡುಕುಗಳನ್ನು ಸುಧಾರಿಸಲು ಮಾನವರ ಮಾರ್ಗದರ್ಶನಕ್ಕಾಗಿ ಕಳುಹಿಸುತ್ತಾನೆ. ಇದರ ಮೂಲ ಸತ್ಯವೇನೆಂದರೆ, ಇಡೀ ಲೋಕವನ್ನು ಪೋಷಿಸುವ, ಜಗತ್ತನ್ನು ನೆಲೆನಿಲ್ಲಿಸುವ ಮತ್ತು ಇಡೀ ಪ್ರಪಂಚದ ಅಸ್ತಿತ್ವವು ಯಾರ ಆಶ್ರಯದಲ್ಲಿ ನಿಂತಿದೆಯೋ ಆ ದೇವನು ತನ್ನ ಅನುಗ್ರಹ ನೀಡುವ ಗುಣವನ್ನು ಸೃಷ್ಟಿಗಳಿಂದ ಎಂದಿಗೂ ತಡೆಹಿಡಿಯುವುದಿಲ್ಲ ಮತ್ತು ಅದನ್ನು ನಿರುಪಯುಕ್ತವಾಗಿ ಬಿಡುವುದಿಲ್ಲ, ಬದಲಾಗಿ ಅವನ ಪ್ರತಿಯೊಂದು ಗುಣವೂ ತಕ್ಕ ಸಮಯದಲ್ಲಿ ತಕ್ಷಣವೇ ಪ್ರಕಟವಾಗುತ್ತದೆ."

(ಹುಝೂರ್ ಹೇಳಿದರು:) ಈ ಕಾಲದಲ್ಲಿ, ಅಲ್ಲಾಹನ ವಾಗ್ದಾನದಂತೆ ಹಝ್ರತ್ ಪೈಗಂಬರ್[ಸ]ರ ನಿಜವಾದ ಪ್ರೇಮಿಯನ್ನು ಅಲ್ಲಾಹನು ತೌಹೀದ್‌ನ ಸ್ಥಾಪನೆಗಾಗಿ ನಿಯೋಜಿಸಿರುವುದನ್ನು ನಾವು ಕಾಣುತ್ತೇವೆ. ಈ ಯುಗದಲ್ಲಿ ಮಸೀಹ್ ಮೌಊದ್ ಮತ್ತು ಮಹ್‌ದಿ ಮೌಊದ್ ಆಗಿರುವ ಹಝ್ರತ್ ಮಿರ್ಝಾ ಗ್ಹುಲಾಮ್ ಅಹ್ಮದ್[ಅ] ಹಝ್ರತ್ ಪೈಗಂಬರ್[ಸ]ರ ಬೋಧನೆ ಮತ್ತು ಸುನ್ನತ್ತಿನ ಪ್ರಾಯೋಗಿಕ ಮಾದರಿಯಾಗಿದ್ದರು. ತಮ್ಮ ಯಜಮಾನರಾದ ಹಝ್ರತ್ ಪೈಗಂಬರ್[ಸ]ರನ್ನು ಅನುಸರಿಸಿ ಅಲ್ಲಾಹನ ತೌಹೀದನ್ನು ಹರಡಲು ಅವರ ಹೃದಯವು ನೋವಿನಿಂದ ತುಂಬಿತ್ತು.

ಹೀಗಾಗಿ ಅವರ ಬರಹಗಳಲ್ಲಿ ಮತ್ತು ನಿತ್ಯಜೀವನದಲ್ಲಿ ನಮಗೆ ಇದರ ಅನೇಕ ಉದಾಹರಣೆಗಳು ಕಂಡುಬರುತ್ತವೆ. ಅವುಗಳಲ್ಲಿ ಕೆಲವನ್ನು ನಾನು ಪ್ರಸ್ತುತಪಡಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ನಮ್ಮೊಂದಿಗೂ ದೇವನು ನಡೆಸುವ ವ್ಯವಹಾರ ವಿಸ್ಮಯಕರವಾಗಿದೆ. **ಅನ್‌ತ ಮಿನ್ನೀ ಬಿಮನ್‌ಝಿಲತಿ ತೌಹೀದೀ ವ ತಫ್‌ರೀದೀ** (ನೀನು ನನ್ನೊಂದಿಗೆ ನನ್ನ ತೌಹೀದ್ ಮತ್ತು ಏಕತ್ವದ ಸ್ಥಾನದಲ್ಲಿದ್ದೀಯೆ) ಎಂಬುದುದಾಗಿ ನಮಗೆ ಲಭಿಸಿದ ಇಲ್‌ಹಾಮ್ ಒಂದು ಹೊಸ ರೀತಿಯ ಇಲ್‌ಹಾಮ್ ಆಗಿದೆ. ಇದಕ್ಕೂ ಮೊದಲು ಯಾವುದೇ ಇಲ್‌ಹಾಮ್ ವಾಕ್ಯಗಳಲ್ಲಿ ನಾವು ಇಂತಹ ಪದಗಳನ್ನು ಕಂಡಿಲ್ಲ. ನನ್ನ ಚಿಂತೆಯ ಪ್ರಕಾರ ಇದರ ಅರ್ಥವೇನೆಂದರೆ: ಲೋಕದಲ್ಲಿ ದೇವನ ತೌಹೀದನ್ನು ತೀವ್ರವಾಗಿ ಅವಮಾನಿಸಲಾಗುತ್ತಿರುವಾಗ ಮತ್ತು ಅತ್ಯಂತ ಕೀಳಾಗಿ ಕಾಣಲಾಗುತ್ತಿರುವಾಗ, ಅಂತಹ ಸಮಯದಲ್ಲಿ ನಿಯೋಜಿಸಲ್ಪಟ್ಟ ವ್ಯಕ್ತಿಯು ತೌಹೀದಿನ ಸ್ಥಾನದಲ್ಲೇ ಇರುತ್ತಾನೆ. ಅಂತಹ ವ್ಯಕ್ತಿಯು ಪೂರ್ಣವಾಗಿಯೂ ತೌಹೀದಿನ ಸ್ವರೂಪವೇ ಆಗಿರುತ್ತಾನೆ."

ಶಿರ್ಕ್ ಮತ್ತು ಅದರ ಸೂಕ್ಷ್ಮ ವಿಧಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: "ಪ್ರತಿಯೊಂದು ರೀತಿಯ ಶಿರ್ಕಿನಿಂದ ದೂರವಿರಬೇಕು. ಸೂರ್ಯನನ್ನಾಗಲಿ, ಚಂದ್ರನನ್ನಾಗಲಿ, ಆಕಾಶದ ನಕ್ಷತ್ರಗಳನ್ನಾಗಲಿ, ಗಾಳಿ, ಬೆಂಕಿ, ನೀರು ಅಥವಾ ಭೂಮಿಯ ಮತ್ತಾವುದೇ ವಸ್ತುವನ್ನಾಗಲಿ ಆರಾಧ್ಯನೆಂದು ಭಾವಿಸಬಾರದು. ಪ್ರಾಪಂಚಿಕ ವಸ್ತುಗಳಿಗೆ ದೇವನ ಪಾಲುದಾರರಂತೆ ಗೌರವ ನೀಡಬಾರದು ಮತ್ತು ಅವುಗಳ ಮೇಲೆ ಅಷ್ಟೊಂದು ಭರವಸೆ ಇಡಬಾರದು. ತನ್ನ ಧೈರ್ಯ ಮತ್ತು ಪ್ರಯತ್ನವನ್ನು ಕೂಡ ದೊಡ್ಡದಾಗಿ ಕಾಣಬಾರದು, ಏಕೆಂದರೆ ಇದು ಕೂಡ ಶಿರ್ಕಿನ ಒಂದು ವಿಧವಾಗಿದೆ. ಬದಲಾಗಿ ಎಲ್ಲವನ್ನೂ ಮಾಡಿ ನಾವು ಏನೂ ಮಾಡಿಲ್ಲ ಎಂದುಕೊಳ್ಳಬೇಕು. ತನ್ನ ಅರಿವು ಮತ್ತು ತನ್ನ ಕರ್ಮಗಳ ಬಗ್ಗೆ ಹೆಮ್ಮೆ ಪಡಬಾರದು, ಬದಲಾಗಿ ತನ್ನನ್ನು ಸ್ವತ ನಿಜವಾದ ಅಜ್ಞಾನಿ ಮತ್ತು ದುರ್ಬಲನೆಂದು ಭಾವಿಸಿ, ಅಲ್ಲಾಹನ ಸನ್ನಿಧಿಯಲ್ಲಿ ಸದಾ ಬಿದ್ದಿರಬೇಕು. ಮನುಷ್ಯನ ಅರಿವಿಗೆ ಗುರುವಿನ ಅಗತ್ಯವಿದೆ ಮತ್ತು ಅದು ಸೀಮಿತವಾಗಿದೆ. ಆದರೆ ದೇವನ ಜ್ಞಾನಕ್ಕೆ ಯಾರ ಆವಶ್ಯಕತೆಯೂ ಇಲ್ಲ."

(ಹುಝೂರ್ ಹೇಳಿದರು:) ಇಂದಿನ ಕಾಲದ ಪ್ರಭಾವದಿಂದಾಗಿ ಕೆಲವೊಮ್ಮೆ ಮಕ್ಕಳು ಕೆಲವು ಪ್ರಶ್ನೆಗಳನ್ನು ಕೇಳುತ್ತಾರೆ. 'ಅಲ್ಲಾಹನನ್ನು ಯಾರು ಸೃಷ್ಟಿಸಿದರು? ಅಲ್ಲಾಹನು ಎಲ್ಲಿಂದ ಬಂದನು?' ಎಂದು ಪತ್ರ ಬರೆದು ಕೇಳುತ್ತಾರೆ. ಬಹುಶಃ ದೊಡ್ಡವರು ಅವರಿಗೆ ಹೇಳಿಕೊಡುತ್ತಾರೆ ಅಥವಾ ಸ್ವತಃ ಅವರ ಮನಸ್ಸಿನಲ್ಲೇ ಇಂತಹ ಪ್ರಶ್ನೆಗಳು ಮೂಡುತ್ತವೆ. ಆದರೆ ಅಲ್ಲಾಹನ ಗುಣಗಳು ಹೇಗಿವೆ ಎಂದರೆ, ಅಲ್ಲಾಹನು ಅನಾದಿ ಕಾಲದಿಂದ ಇದ್ದಾನೆ ಮತ್ತು ಸದಾ ಇರುವವನು ಹಾಗೂ ಅನಂತನಾಗಿದ್ದಾನೆ. ಆದ್ದರಿಂದ ಅವನೇ ಎಲ್ಲರನ್ನೂ ಸೃಷ್ಟಿಸಿದ್ದಾನೆ, ಅವನನ್ನು ಯಾರೂ ಸೃಷ್ಟಿಸಿಲ್ಲ. ತನ್ನಿಂದ ತಾನೇ ಅಸ್ತಿತ್ವಕ್ಕೆ ಬಂದಂತಹ ಯಾವುದಾದರೂ ಅಂತಿಮ ವಸ್ತುವಿನ ಕಲ್ಪನೆಯು ಮೂಡುವುದಿದ್ದರೆ, ಅದು ಅಲ್ಲಾಹನೇ ಆಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ದೇವನು ನಮ್ಮಿಂದ ಬಯಸುವ ಮತ್ತು ಯಾವುದನ್ನು ನಂಬುವುದರಿಂದ ಮುಕ್ತಿಯು ಲಭಿಸುತ್ತದೆಯೋ, ಆ ನಿಜವಾದ ತೌಹೀದ್ ಏನೆಂದರೆ: ದೇವನನ್ನು ಪ್ರತಿಯೊಂದು ವಿಧದ ಸಹಭಾಗಿಯಿಂದ – ಅದು ವಿಗ್ರಹವಾಗಿರಲಿ, ಮನುಷ್ಯನಾಗಿರಲಿ, ಸೂರ್ಯ ಅಥವಾ ಚಂದ್ರನಾಗಿರಲಿ, ಅಥವಾ ತನ್ನ ಅಹಂ, ಉಪಾಯ ಅಥವಾ ಮೋಸವೇ ಆಗಿರಲಿ – ಎಲ್ಲದರಿಂದಲೂ ಅವನು ಮುಕ್ತನಾಗಿದ್ದಾನೆ ಎಂದು ತಿಳಿಯುವುದಾಗಿದೆ. ಅವನಿಗೆ ಸಮಾನವಾಗಿ ಬೇರೆ ಯಾರನ್ನೂ ಶಕ್ತನೆಂದೋ ಅನ್ನದಾತನೆಂದೋ ಭಾವಿಸದಿರುವುದು, ಬೇರೆ ಯಾರನ್ನೂ ಗೌರವ ನೀಡುವವನೆಂದೋ ಅವಮಾನ ಮಾಡುವವನೆಂದೋ ಭಾವಿಸದಿರುವುದು ಮತ್ತು ಬೇರೆ ಯಾರನ್ನೂ ಸಹಾಯಕ ಹಾಗೂ ಬೆಂಬಲಿಗನೆಂದು ತಿಳಿಯದಿರುವುದು ಆಗಿದೆ. ಎರಡನೆಯದಾಗಿ, ತನ್ನ ಪ್ರೀತಿಯನ್ನು ಕೇವಲ ಅವನಿಗೆ ಮಾತ್ರ ಮೀಸಲಿಡುವುದು; ತನ್ನ ಆರಾಧನೆಯನ್ನು, ಆಸೆಗಳನ್ನು ಮತ್ತು ಪ್ರತೀಕ್ಷೆಗಳನ್ನು ಕೇವಲ ಅವನಿಗೆ ಮಾತ್ರ ಮೀಸಲಿಡುವುದು ಹಾಗೂ ಅವನನ್ನು ಮಾತ್ರ ಭಯಪಡುವುದು.

ಒಟ್ಟಾರೆ ಹೇಳುವುದಾದರೆ, ಈ ಮೂರು ವಿಧದ ವಿಶೇಷತೆಗಳಿಲ್ಲದೆ ಯಾವುದೇ ತೌಹೀದ್ ಪರಿಪೂರ್ಣವಾಗಲು ಸಾಧ್ಯವಿಲ್ಲ.

1. ಅಸ್ತಿತ್ವದ ದೃಷ್ಟಿಯಿಂದ ತೌಹೀದ್ – ಅಂದರೆ ಅಸ್ತಿತ್ವದಲ್ಲಿರುವ ಎಲ್ಲ ವಸ್ತುಗಳನ್ನು ಶೂನ್ಯದಂತೆ (ಇಲ್ಲದಂತೆ) ತಿಳಿಯುವುದು.

2. ಗುಣಗಳ ದೃಷ್ಟಿಯಿಂದ ತೌಹೀದ್ – ಅಂದರೆ ಪಾಲನೆ ಮತ್ತು ದೈವತ್ವದ ಗುಣಗಳನ್ನು ದೇವನ ಹೊರತು ಬೇರೆ ಯಾರಲ್ಲೂ ಒಪ್ಪದಿರುವುದು.

3. ತನ್ನ ಪ್ರೀತಿ, ಸತ್ಯಸಂಧತೆ ಮತ್ತು ಪರಿಶುದ್ಧತೆಯ ದೃಷ್ಟಿಯಿಂದ ತೌಹೀದ್ – ಅಂದರೆ ಪ್ರೀತಿ ಮತ್ತು ದಾಸ್ಯದ ಲಕ್ಷಣಗಳಲ್ಲಿ ಯಾರನ್ನೂ ಅವನಿಗೆ ಪಾಲುದಾರರನ್ನಾಗಿಸದಿರುವುದು ಹಾಗೂ ಅವನಲ್ಲೇ ಲೀನವಾಗುವುದು."

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಒಬ್ಬ ದುರ್ಬಲ ಮನುಷ್ಯನನ್ನು ದೇವನೆಂದು ಕರೆಯಲಾಗುತ್ತಿರುವ ಈ ಸುಳ್ಳು ಆರೋಪದಿಂದ ಆಕಾಶವೇ ಬಿರುಕು ಬಿಡುವಂತಿದೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದ್ದು ಸತ್ಯವೇ ಆಗಿದೆ. ಇತರ ಜನರು ಸ್ವರ್ಗವನ್ನು ಬಯಸುತ್ತಾರೆ, ಆದರೆ ಈ ನೋವಿನಿಂದ ನನ್ನ ಸ್ಥಿತಿ ಏನಾಗಿದೆ ಎಂದರೆ, ನನ್ನ ಜೀವಿತಾವಧಿಯಲ್ಲೇ ಮಾನವರು ಈ ಶಿರ್ಕಿನಿಂದ ಮುಕ್ತರಾಗುವುದನ್ನು ಮತ್ತು ದೇವನ ವೈಭವವು ಪ್ರಕಟವಾಗುವುದನ್ನು ನಾನು ನೋಡಬೇಕು ಎಂಬುದೇ ನನ್ನ ಸ್ವರ್ಗ ಆಗಿದೆ. ನನ್ನ ಆತ್ಮವು ಸದಾ ಹೀಗೆ ದುಆ ಮಾಡುತ್ತದೆ: ಹೇ ದೇವಾ, ನಾನು ನಿನ್ನ ಕಡೆಯಿಂದ ಬಂದವನಾಗಿದ್ದರೆ ಮತ್ತು ನಿನ್ನ ಕೃಪೆಯ ನೆರಳು ನನ್ನೊಂದಿಗಿದ್ದರೆ, ಹಝ್ರತ್ ಈಸಾ ಮಸೀಹ್(ಅ) ದೈವತ್ವದ ವಾದವನ್ನು ಮಾಡಿದ್ದರು ಎಂಬ ಆಪಾದನೆ ಅವರ ತಲೆಯ ಮೇಲಿಂದ ದೂರವಾಗುವ ಆ ದಿನವನ್ನು ನೀನು ನನಗೆ ತೋರಿಸು."

"ದೇವನು ಈ ಜನರಿಗೆ ದೃಷ್ಟಿಯನ್ನು ನೀಡಲಿ ಮತ್ತು ಅವರು ಅವನ ಏಕತ್ವದ ಮೇಲೆ ನಂಬಿಕೆಯಿಟ್ಟು, ಅವನ ಪ್ರವಾದಿಯನ್ನು ಗುರುತಿಸಲಿ ಹಾಗೂ ತ್ರಿತ್ವದ ನಂಬಿಕೆಯಿಂದ ಪಶ್ಚಾತ್ತಾಪ ಪಡಲಿ ಎಂಬುದೇ ಒಂದು ದೀರ್ಘ ಕಾಲದಿಂದ ನನ್ನ ಐದು ಹೊತ್ತಿನ ಪ್ರಾರ್ಥನೆಯಾಗಿದೆ."

(ಹುಝೂರ್ ಹೇಳಿದರು:) ಕ್ರೈಸ್ತ ಧರ್ಮವು ಅಳಿಯುತ್ತಾ ಹೋಗುತ್ತಿದೆ, ತ್ರಿತ್ವದ ಸಿದ್ಧಾಂತವು ಈಗ ಅವರ ಗ್ರಂಥಗಳ ಸಿದ್ಧಾಂತವಾಗಿ ಮಾತ್ರ ಉಳಿದಿದೆ. ವಿಶೇಷವಾಗಿ ಯುರೋಪಿನಲ್ಲಿ ಇದನ್ನು ಅನುಸರಿಸುವವರ ಸಂಖ್ಯೆ ಬಹಳ ಕಡಿಮೆಯಾಗಿದೆ. ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾದಲ್ಲಿ ಇನ್ನೂ ಇದ್ದಾರೆ. ಆದರೆ ತ್ರಿತ್ವದ ಸಿದ್ಧಾಂತವನ್ನು ಬಿಡುತ್ತಿರುವವರು ಕೂಡ ಏಕದೇವನನ್ನು ನಂಬುತ್ತಿಲ್ಲ. ಆದ್ದರಿಂದ, ಅವರನ್ನು ತೌಹೀದಿನಲ್ಲಿ ನಿಲ್ಲಿಸಲು ಸಾಧ್ಯವಾದಷ್ಟು ಪ್ರಯತ್ನವನ್ನು ನಾವು ಮಾಡಬೇಕು.

ಯಾವ ಉದ್ದೇಶವನ್ನು ಪೂರೈಸಲು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಕಳುಹಿಸಿದ್ದನೋ ಮತ್ತು ಯಾವ ತೌಹೀದಿನ ಬೋಧನೆಯನ್ನು ಹಝ್ರತ್ ಪೈಗಂಬರ್(ಸ) ಘೋಷಿಸಿದರೋ ಆ ನಿಜವಾದ ತೌಹೀದಿನ ಪ್ರಕಾರ

ನಡೆಯುವವರನ್ನಾಗಿ ಅಲ್ಲಾಹನು ನಮ್ಮನ್ನು ಮಾಡಲಿ ಹಾಗೂ ನಾವು ಅದನ್ನು ಲೋಕದಲ್ಲಿ ಹರಡುವವರಾಗಲಿ. ಏಕೆಂದರೆ ಈಗ ಲೋಕದ ಉಳಿವಿಗಾಗಿ ಇರುವ ಪರಿಹಾರ ಇದೊಂದೇ ಆಗಿದೆ."

ಖುತ್ಬದ ಕೊನೆಯಲ್ಲಿ ಹುಝೂರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 03-04-2026

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim | ***Layout:*** Basheer K.P. Manjeshwar

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon